# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3014 (2465)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

ವಿಷಯ : ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ

(ಅ) ಹಾಸನ-ಮೈಸೂರು, ಬಾಣವಾರ-ಹುಳಿಯೂರು ಮತ್ತು ತುಮಕೂರು-ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳಡಿ ಅಂದಾಜು ಪಟ್ಟಿಯಂತೆ ಕೈಗೊಳ್ಳಬೇಕಾದ ಕಾಮಗಾರಿಗಳು ಯಾವುವು; ಯಾರಿಗೆ ಗುತ್ತಿಗೆ ನೀಡಲಾಗಿದೆ; ಗುತ್ತಿಗೆ ನೀಡಲು ಪಾಲಿಸಲಾದ ನಿಯಮ/ಮಾನದಂಡಗಳೇನು ; (ಒಪ್ಪಂದದ ಪತ್ರದೊಂದಿಗೆ ವಿವರ ನೀಡುವುದು)

(ಆ) ಸದರಿ ಹೆದ್ದಾರಿಗಳಲ್ಲಿನ ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ಕಾಮಗಾರಿಗಳಿಗಾಗಿ ಮಂಜೂರಾದ ಹಾಗೂ ಬಿಡುಗಡೆಯಾದ ಅನುದಾನ ಎಷ್ಟು ; ಇದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಇ) ಮೂರು ಕಾಮಗಾರಿಗಳಲ್ಲಿ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದರೂ ಕೂಡ (ಪೂರ್ತಿ ಪ್ರಗತಿಗಿಂತ ಹೆಚ್ಚಿನದಾಗಿ) ಕಾಮಗಾರಿಗಳನ್ನು ಮಾಡಲಾಗಿದೆಯೆಂದು ಗುತ್ತಿಗೆದಾರರಿಗೆ ಬಿಲ್ಲು ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕೆಲವು ಸ್ಥಳಗಳಲ್ಲಿ ಕಳಪೆ ಗುಣಮಟ್ಟದ ಕಾಮಗಾರಿಗಳ್ಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರುಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಈ ಕಾಮಗಾರಿಗಳನ್ನು ಕೈಗೊಳ್ಳಲು ಭೂಸ್ವಾಧೀನ ಮಾಡಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಮಾಡಲಾಗಿದೆ ಹಾಗೂ ಯಾವ ರೀತಿ ಪರಿಹಾರ ನೀಡಲಾಗಿದೆ; ಅಥವಾ ಇನ್ನೂ ಭೂಸ್ವಾಧೀನ ಮಾಡಲು ಬಾಕಿ ಇದೆಯೇ; ಇದ್ದಲ್ಲಿ, ಕಾರಣಗಳೇನು; (ಯೋಜನೆವಾರು, ಪ್ರಕರಣವಾರು ವಿವರವಾದ ಮಾಹಿತಿ ನೀಡುವುದು)

(ಉ) ಈ ಮೂರು ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆ ಬದಿಯ ಎಷ್ಟು ಮರಗಳನ್ನು ತೆರವುಗೊಳಿಸಲಾಗಿದೆ; ಯಾವ ರೀತಿ ಹರಾಜು ಮಾಡಲಾಗಿದೆ ; ಯಾವ ತಳಿಯ ಮರಗಳನ್ನು ತೆರವುಗೊಳಿಸಲಾಗಿದೆ ; (ಯೋಜನೆವಾರು ವಿವರ ನೀಡುವುದು)

(ಊ) ತೆರವುಗೊಳಿಸಿದ ಮರಗಳ ಬದಲಾಗಿ ಎಷ್ಟು ಗಿಡಗಳನ್ನು ಎಲ್ಲೆಲ್ಲಿ ನೆಡಲಾಗಿದೆ; ಯಾವ ತಳಿಯ ಗಿಡಗಳನ್ನು ನೆಡಲಾಗಿದೆ; ಇದಕ್ಕಾಗಿ ಮೀಸಲಿಡಲಾದ ಹಣ ವೆಷ್ಟು ? (ವಿವರವಾದ ಮಾಹಿತಿ ನೀಡುವುದು)